ಯು.ಎಲ್.ಸಿ. ಜಮೀನಿನ ವಿವರ

479 : (315)

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)

ಅ) ಮೈಸೂರು ನಗರ ವ್ಯಾಪ್ತಿಯಲ್ಲಿ ಯು.ಎಲ್.ಸಿ. ಹಾಗೂ ಸರ್ಕಾರಿ ಜಮೀನು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಲ್ಲೆಲ್ಲಿ, ಎಷ್ಟೆಷ್ಟು ಯು.ಎಲ್.ಸಿ ಹಾಗೂ ಸರ್ಕಾರಿ ಜಮೀನುಗಳಿವೆ; ಯಾರ ವಶದಲ್ಲಿವೇ (ಪೂರ್ಣ ವಿವರ ನೀಡುವುದು)?

ಇ) ಸರ್ಕಾರದ ವಶದಲ್ಲಿರುವ ಯು.ಎಲ್.ಸಿ./ಸರ್ಕಾರಿ ಭೂಮಿಯ ಸದ್ಬಳಕೆಗೆ (ಬಹಿರಂಗ ಹರಾಜು) ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಈ ಜಮೀನುಗಳು ಒತ್ತುವರಿಯಾಗಿದ್ದಲ್ಲಿ ಒತ್ತುವರಿ ಮಾಡಿದವರ ವಿರುದ್ಧ ಯಾವ ಕ್ರಮ ಜರುಗಿಸಲಾಗುವುದು?

ಕೆ.ಎಸ್.ಈಶ್ವರಪ್ಪ

ಮಾನ್ಯ ಉಪ ಮುಖ್ಯಮಂತ್ರಿಗಳು

(ಕಂದಾಯ ಗ್ರಾಮೀಣಾಭಿವೃದ್ಧಿ ಮತ್ತು ಪಚಾಯತ್‌ರಾಜ್)

ಅ) ಮೈಸೂರು ನಗರ ವ್ಯಾಪ್ತಿಯಲ್ಲಿ ನಗರ ಭೂಮಿ ಕಾಯ್ದೆಯಡಿ ಸರ್ಕಾರದ ವಶಕ್ಕೆ ಪಡೆದಿರುವ ಜಮೀನುಗಳ ಬಗ್ಗೆಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮೈಸೂರು ನಗರ ವ್ಯಾಪ್ತಿಯಲ್ಲಿ ನಗರ ಭೂಮಿಕಾಯ್ದೆಯಡಿಯಲ್ಲಿ ಸುಮಾರು 516 ಪ್ರಕರಣಗಳ ಬಗ್ಗೆ ಅವಾರ್ಡ್ ನಡವಳಿಕೆ ನಡೆದಿದ್ದು, ಸುಮಾರು 49–42 ಲಕ್ಷ ಚದರ ಮೀಟರ್ ಸರ್ಕಾರದ ವಶಕ್ಕೆ ಪಡೆದು ಈ ಪೈಕಿ 367 ಪ್ರಕರಣಗಳನ್ನು ಸುಮಾರು 36.92 ಲಕ್ಷ ಚದರ ಮೀಟರ್ ಜಮೀನುಗಳು 1988ನೇ ಸಾಲಿನಿಂದ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ವಿವಿಧ ಸರ್ಕಾರಿ ಇಲಾಖೆ ಹಾಗೂ ಸಂಸ್ಥೆಗಳಿಗೆ, ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಿ, ಮೈಸೂರು ರವರಿಗೆ ಮಂಜೂರಾಗಿರುತ್ತದೆ. ಕೆಲವು ಪ್ರದೇಶಗಳಲ್ಲಿ ಹಿಂದಿನಿಂದಲೂ ಅನಧಿಕೃತ ಬಡಾವಣೆಗಳು

ನಿರ್ಮಾಣವಾಗಿರುತ್ತವೆ. ಉಳಿಕೆ 149 ಪ್ರಕರಣಗಳ ಪೈಕಿ ಸುಮಾರು 12.50 ಲಕ್ಷ ಚದರ ಮೀಟರ್ ಜಮೀನಿಗೆ ಅವಾರ್ಡ್ ನಿರ್ಣಯವಾಗಿದ್ದು, ಪರಿಹಾರ ಪಡೆಯದೇ ನ್ಯಾಯಾಲಯಗಳಲ್ಲಿ ಯು.ಎಲ್.ಸಿ. ನಡವಳಿಕೆ ರದ್ದುಪಡಿಸುವಂತೆ ಕೋರಿ ಭೂಮಾಲೀಕರು ಗೌರವ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಸಿವಿಲ್ ನ್ಯಾಯಾಲಯಗಳಲ್ಲಿ ತಾವೆ ಸಲ್ಲಿಸಿದ್ದು, ವಿಚಾರಣೆ ಹಂತದಲ್ಲಿರುತ್ತದೆ. ಮೈಸೂರು ನಗರದ ಸುತ್ತಮುತ್ತಲೂ ಸುಮಾರು 1556.22 ಎಕರೆ ಕೆರೆ, ಕಟ್ಟೆ, ರಸ್ತೆ, ಸಾಮಾಜಿಕ ಅರಣ್ಯ,ಗೋಮಾಳ, ಇತ್ಯಾದಿಗಳಿಗೆ ಸೇರಿದ ಪ್ರದೇಶವಾಗಿದ್ದು, ಈ ಪೈಕಿ 756.39 ಎಕರೆ ಜಮೀನು ಒತ್ತುವರಿಯಲ್ಲಿದ್ದು, ಉಳಿಕೆ 799.23 ಎಕರೆ ಜಮೀನು ಸರ್ಕಾರದ ವಶದಲ್ಲಿರುತ್ತದೆ.

ಇ) ನಗರ ಭೂಮಿ ಕಾಯ್ದೆಯಡಿಯಲ್ಲಿ ಸರ್ಕಾರದ ವಶಕ್ಕೆ ಪಡೆದಿರುವ ಜಮೀನುಗಳು ಈಗಾಗಲೇ ವಿವಿಧ ಸರ್ಕಾರಿ ಇಲಾಖೆ ಹಾಗೂ ಸಂಸ್ಥೆಗಳಿಗೆ, ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾಗಿರುವುದರಿಂದ, ಬಹಿರಂಗ ಹರಾಜು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ನಗರ ಭೂಮಿ ಕಾಯ್ದೆಯಡಿಯಲ್ಲಿ ಸರ್ಕಾರದ ವಶಕ್ಕೆ ಪಡೆದಿರುವ ಜಮೀನುಗಳು ಒತ್ತುವರಿ ಮಾಡಿರುವವರ ವಿರುದ್ಧ ನಿಯಮಾನುಸಾರ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಳಗಾವಿ ವಿಮಾನ ನಿಲ್ದಾಣದ ವಿಸ್ತರಣೆ/ಅಭಿವೃದ್ಧಿ

452

ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)

ಅ) ಬೆಳಗಾವಿಯಲ್ಲಿರುವ ವಿಮಾನ ನಿಲ್ದಾಣದ ವಿಸ್ತರಣೆಗಾಗಿ ಎಷ್ಟು ಎಕರೆ ಜಾಗದ ಅವಶ್ಯಕೆಯಿದೆ?

ಆ) ಹಾಗಿದ್ದಲ್ಲಿ, ವಿಮಾನ ನಿಲ್ದಾಣದ ವಿಸ್ತರಣೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಕ್ಷೇತ್ರವೆಷ್ಟು; ಈ ಕುರಿತು ಭೂ ಮಾಲೀಕರಿಗೆ ಪರಿಹಾರಧನವನ್ನು ವಿತರಿಸಲಾಗಿದೆಯೇ?